ಸೆಕ್ಷನ್‌ಗಳನ್ನು ಅಕೌಂಟಿಂಗ್ ಸೆಕ್ಷನ್ ಆಫೀಸುಗಳಾಗಿ ಪರಿವರ್ತಿಸಲು ಸಾಧ್ಯವಿಲ್ಲ. ಪ್ರತಿಯೊಂದು ಪ್ರಕರಣವನ್ನು ಆದರ ಅರ್ಹತೆ ಮತ್ತು ಅವಶ್ಯಕತೆ ಮೇಲೆ ಪರಿಶೀಸಲಾಗುತ್ತದೆ.

ಶ್ರೀ ಪಿ. ಬಿ. ಓಂಕಾರಮೂರ್ತಿ.—ಅಧ್ಯಕ್ಷರೇ, ಈಗ ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲಿಯೂ ಕೂಡ ವಿದ್ಯುಚ್ಛಕ್ತಿ ಗ್ರಾಹಕರು ತಮ್ಮ ಹಣವನ್ನು ತುಂಬುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡಿದ್ದಾರೆ ಮೇಲಾಗಿ ಸರಕಾರದ ಈ ಒಂದು ಯೋಜನೆಯಿಂದ ಎಲ್ಲಾ ಗ್ರಾಮಗಳಿಗೂ ಕೂಡ ವಿದ್ಯುಚ್ಛಕ್ತಿ ಸರಬರಾಜು ಪೂರ್ತಿಯಾಗಿ ಆಗಿರುವುದರಿಂದ, ಮತ್ತು ಪೆಚ್ಚಾಗಿ ಎಲ್ಲಾ ಕಡೆಗಳಲ್ಲಿಯೂ ಬ್ಯಾಂಕ್‌ಸೌಲಭ್ಯಗಳಿರುವುದರಿಂದ, ನಾನ್ ಅಕೌಂಟಿಂಗ್ ಸೆಕ್ಷನ್ ಇರುವ ಕಡೆ ಸಾಮೂಹಿಕವಾಗಿ ಎಲ್ಲವನ್ನು ಅಕೌಂಟಿಂಗ್ ಸೆಷನ್ ಆಫೀಸುಗಳಾಗಿ ಪರಿವರ್ತನೆ ಮಾಡುವ ಒಂದು ಯೋಜನೆ ಸರಕಾರಕ್ಕೆ ಇದೆಯೇ ಎಂದು ಕೇಳಬಯಸುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿದ ಸಮಸ್ಯೆಗೆ, ಅಂತಹ ಕಡೆಗಳಲ್ಲಿ ಅಕೌಂಟಿಂಗ್ ಸೆಕ್ಷನ್ ಮಾಡದೆನೇ ಜನರು ಹಣ ಕಟ್ಟಲು ಅನುಕೂಲವಾಗುವಂತೆ ಒಂದು ಬೇರೆ ವ್ಯವಸ್ಥೆಯನ್ನು ಮಾಡುತ್ತೇವೆ.

ರಾಜ್ಯದಲ್ಲಿರುವ ಡೀಸಲ್ ಜನರೇಟರ್‌ಗಳಂ

೩೧೯. **ಶ್ರೀ ಕೆ. ಹೆಚ್. ಪಾಟೀಲ್** (ಗದಗ) ಮಾನ್ಯ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆ ಬಗ್ಗೆ ಡೀಸಲ್ ಜನರೇಟರ್‌ಗಳನ್ನು ರಾಜ್ಯದ ಯಾವ ಯಾವ ಭಾಗದಲ್ಲಿ ಸ್ಥಾಪನೆ ಮಾಡಲು ಕೇಂದ್ರ ಸರ್ಕಾರದಿಂದ ಅನುಮತಿ ದೊರೆತಿದೆ ಮತ್ತು ಅವುಗಳಿಂದ ಉತ್ಪತ್ತಿಯಾಗುವ ವಿದ್ಯುಚ್ಛಕ್ತಿ ಎಷ್ಟು ಮೆಗಾವಾಟ್‌ಗಳು?

ಆ) ರಾಜ್ಯದಲ್ಲಿ ಖಾಸಗಿಯ ವ್ಯಕ್ತಿಗಳಿಂದ ವಿದ್ಯುಚ್ಛಕ್ತಿ ಉತ್ಪಾದನೆ ಬಗ್ಗೆ ಅರ್ಜಿಗಳೇನಾದರೂ ಬಂದಿವೆಯೇ. ಹಾಗಿದ್ದಲ್ಲಿ ಆ ಅರ್ಜಿಗಳ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನಂ ?

ಇ) ರಾಜ್ಯದಲ್ಲಿ ಮಾಂಡಿನ ವರ್ಷಗಳಲ್ಲಿ ವಿದ್ಯುಚ್ಛಕ್ತಿ ಅಭಾವ ಉಂಟಾಗುವ ಪರಿಸ್ಥಿತಿ ಇದೆಯೆ, ಹಾಗಿದ್ದಲ್ಲಿ ಅಭಾವವನ್ನು ನೀಗಲು ಸರ್ಕಾರದವರು ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು).—

ಅ) ಈ ಕೆಳಕಂಡ ಸ್ಥಳಗಳಲ್ಲಿ ಡೀಸಲ್ ಜನರೇಟರ್‌ಗಳನ್ನು ಸ್ಥಾಪಿಸುವುದಕ್ಕೆ ಕೇಂದ್ರ ಸರ್ಕಾರದಿಂದ ಅನುಮತಿ ದೊರೆತಿದೆ.

೧) ಕೋಲಾರ ೨) ಬೀದರ್ ೩) ಜಮಖಂಡಿ ೪) ಇಂಡಿ

ಒಟ್ಟು ಸಾಮರ್ಥ್ಯ—೭೭.೭೬ ಮೆಗಾವ್ಯಾಟ್‌ಗಳಂ

ವರ್ಷಕ್ಕೆ ವಿದ್ಯುಚ್ಛಕ್ತಿ ಉತ್ಪನ್ನ—೪೭೫ ಮಿ. ಯೂನಿಟ್‌ಗಳು

ಇದಲ್ಲದೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ಯಲಹಂಕದ ಬಳಿ ೨೨೦ ಮೆಗಾವ್ಯಾಟ್ ಸಾಮರ್ಥ್ಯದ ಗ್ಯಾಸ್ ಟರ್ಬೈನ್ ಸ್ಟೇಷನನ್ನು ಸ್ಥಾಪನೆ ಮಾಡಲು ಅನುಮತಿ ದೊರೆತಿದೆ.

ಆ) ಬಂದಿದೆ. ಎಂಟು ಖಾಸಗಿ ಸಂಸ್ಥೆಗಳಿಗೆ ಕ್ಯಾಪ್ಟಿವ್ ಮಿನಿ ಹೈಡಲ್ ಸ್ಟೇಷನ್‌ಗಳನ್ನು ಸ್ಥಾಪಿಸಲು ಅನುಮತಿಯನ್ನು ಕೊಡಲಾಗಿದೆ. ಇನ್ನೊಂದಂ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರದ ಅನುಮೋದನೆಗಾಗಿ ಕಳಂಹಿಸಲಾಗಿದೆ.

ಇ) ಇದೆ ಈ ವಿದ್ಯುಚ್ಛಕ್ತಿಯ ಅಭಾವವನ್ನು ಕಡಿಮೆ ಮಾಡಲಂ ಈ ಕೆಳಕಂಡ ಪ್ರಗತಿಯಲ್ಲಿರುವ ಯೋಜನೆಗಳನ್ನು ತ್ವರಿತವಾಗಿ ಮುಗಿಸಲು ಯೋಜಿಸಲಾಗಿದೆ.—

೧) ವರಾಹಿ ಜಲವಿದ್ಯುತ್ ಯೋಜನೆ–೨೫೦ ಮೆಗಾವ್ಯಾಟ್

೨) ಘಟಪ್ರಭ ಅಣೆಕಟ್ಟು ವಿದ್ಯುದಾಗಾರ–೩೨ ಮೆಗಾವ್ಯಾಟ್

೩) ರಾಯಚೂರು ಶಾಖೋತ್ಪನ್ನದ ಮೂರನೆಯ ಘಟಕ–೨೧೦ ಮೆಗಾವ್ಯಾಟ್

ಇದಲ್ಲದೆ ಈ ಕೆಳಕಂಡ ಹೊಸ ಯೋಜನೆಗಳನ್ನು ಶೀಘ್ರದಲ್ಲಿಯೇ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

೧)	ಕಾಳಿನದಿ ಯೋಜನೆಯ ಎರಡನೆಯ ಹಂತ	– ೨೭೦ ಮೆ. ವ್ಯಾ
೨)	ಶರಾವತಿ ಟೇಲ್‌ರೇಸ್ ಯೋಜನೆ	– ೨೪೦ ಮೆ. ವ್ಯಾ
೩)	ರಾಯಚೂರು ಶಾಖೋತ್ಪನ್ನದ ಳಿನೇ ಘಟಕ	– ೨೧೦ ಮೆ. ವ್ಯಾ
೪)	ಗ್ರಾಮೀಣ ಪ್ರದೇಶಗಳಲ್ಲಿ ಡೀಸಲ್ ಜನರೇಟರ್‌ಗಳ ಸ್ಥಾಪನೆ	– ೭೭ ಮೆ. ವ್ಯಾ
೫)	ವಿದ್ಯುತ್ ಮಂಡಲಿಯಿಂದ ಯಲಹಂಕದ ಹತ್ತಿರ ಗ್ಯಾಸ್ ಟರ್ಬೈನ್ ಸ್ಥಾಪನೆ.	– ೧೨೦ ಮೆ. ವ್ಯಾ

ಶ್ರೀ ಕೆ. ಹೆಚ್. ಪಾಟೀಲ್.—ಅಧ್ಯಕ್ಷರೇ, ಈ ಪ್ರಶ್ನೆಯನ್ನು ಕೇಳಿರುವ ಮುಖ್ಯವಾದ ಉದ್ದೇಶ ಅಂದರೆ, ಈಗ ಇರತಕ್ಕಂಥ ಉದ್ದಿಮೆಗಳಿಗೆ ಈಗಿರುವ ಪರಿಸ್ಥಿತಿಯಲ್ಲಿ ವಿದ್ಯುಚ್ಛಕ್ತಿ ಪೂರೈಕೆ ಆಗದಿರುವುದರಿಂದ ಪೂರ್ವಯೋಜಿತವಾಗಿ ಕೆಲವು ಯೋಜನೆಯನ್ನು ಮಾಡಿದ್ದೀರಿ. ಆದರ ಅನ್ವಯ ಎಷ್ಟು ವಿದ್ಯುಚ್ಛಕ್ತಿ ಬೇಕಾಗುತ್ತದೆ ಎನ್ನುವುದಕ್ಕೆ ಅಂದಾಜು ಪಟ್ಟಿಯನ್ನು ತಯಾರು ಮಾಡಿದ್ದೀರಿ. ಈ ಎಲ್ಲಾ ಯೋಜನೆಗಳು ಪೂರ್ತಿ ಆದರೆ ೨ ಸಾವಿರ ಚಿಲ್ಲರೆ ಮೆಗಾವ್ಯಾಟ್ ವಿದ್ಯುಚ್ಛಕ್ತಿ ಸಿಗಬಹುದು ಎಂದು ಹೇಳಿದ್ದೀರಿ. ಇಷ್ಟು ಯೋಜನೆಗಳು ಮುಗಿದರೂ ಸಹ ವಿದ್ಯುಚ್ಛಕ್ತಿ ಕೊರತೆ ಬರುತ್ತದೆಯೇ ? ಹಾಗೆ ಬಂದಲ್ಲಿ ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ, ಅಂದರೆ ವಿದ್ಯುಚ್ಛಕ್ತಿಯ ಹೆಚ್ಚಿನ ಉತ್ಪಾದನೆಗೆ ಯಾವ ರೀತಿಯಲ್ಲಿ ಕ್ರಮಗಳನ್ನು ತೆಗೆದುಕೊಳ್ಳುವ ಯೋಚನೆ ಇದೆ ಎಂಬುದನ್ನು ದಯವಾಡಿ ತಿಳಿಸಬೇಕು.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರ ಯೋಚನೆ ಏನು ಇದೆ ಅದು ಸರಿಯಾಗಿದೆ. ನಾವು ಇನ್ನು ೧೦ ವರ್ಷಗಳಲ್ಲಿ ಬೇಡಿಕೆಯು ಏನು ಆಗಬಹುದು ಎನ್ನುವುದನ್ನು ಯೋಚನೆ ಮಾಡಿ ಇದನ್ನು ಮಾಡಿದ್ದೇವೆ. ಆದರೆ ೧೯೯೦ರ ದೊತ್ತಿಗೆ ಅಂದರೆ ಇನ್ನು ಮೂರು ವರ್ಷಗಳ ಹೊತ್ತಿಗೆ ಎರಡು ಯೋಜನೆಗಳ ಪ್ರಾಜೆಕ್ಟ್‌ಗಳು ಕಂಪ್ಲೀಟ್ ಆಗುತ್ತದೆ. ವಾರಾಹಿ ಯೋಜನೆ ಹಾಗೂ ರಾಯಚೂರಿನ ಮೂರನೆ ಯೂನಿಟ್‌ಗಳು ಪೂರ್ತಿಯಾಗುತ್ತದೆ, ಅದು ಆದರೂ ಕೊರತೆ ನೀಗುವುದಿಲ್ಲ. ೧೯೯೦ನೇ ಇಸವಿಗೆ ನಮ್ಮ ಕೈಯಲ್ಲಿ ಇರತಕ್ಕಂಥ ಪ್ರಾಜೆಕ್ಟ್‌ಗಳು ಕಂಪ್ಲೀಟ್ ಆದರೂ ೨ ಸಾವಿರ ಮಿಲಿಯನ್ ಕೊರತೆ ಬರುತ್ತದೆ. ಈ ಎರಡು ಸಾವಿರ ಮಿಲಿಯನ್ ಕೊರತೆ ಏನು ಬರುತ್ತದೆ ಇದಕ್ಕೆ ಏನು ಮಾಡಬೇಕು ಎಂಬುದರ ಬಗ್ಗೆ ನಾವು ಇವೊತ್ತು ಕೇಂದ್ರ ಸರ್ಕಾರದ ಒಪ್ಪಿಗೆಯಿಂದ ಅಥವಾ ಬೇರೆ ಯಾವುದಾದರೂ ಮೂಲಗಳಿಂದ ಹಣವನ್ನು ಪಡೆದುಕೊಂಡು ೨ ಸಾವಿರ ಮೆಗಾವ್ಯಾಟ್ ಶಕ್ತಿ ಇರತಕ್ಕಂಥ ಸೂಪರ್ ಥರ್ಮಲ್ ಪವರ್ ಪ್ಲಾಂಟನ್ನು ಸ್ಥಾಪನೆ ಮಾಡಲು ಕೇಂದ್ರ ಸರ್ಕಾರದ ಅನುಮತಿಯನ್ನು ಕೇಳುತ್ತೇವೆ. ನಾವು ಇದನ್ನು ಕೋಸ್ಟಲ್ ಏರಿಯಾದಲ್ಲಿ ಮಾಡಿದರೆ ಮಾತ್ರ ಕೊರತೆ ನೀಗುತ್ತದೆ. ನಾನು ಮತ್ತು ಮಾನ್ಯ ಮುಖ್ಯಮಂತ್ರಿಗಳು ಪುನಃ ಪುನಃ ಈ ಬೇಡಿಕೆಯನ್ನು ಕೇಂದ್ರ ಸರ್ಕಾರದ ಅನುಮತಿಗಾಗಿ ಕೋರಿದ್ದೇವೆ. ಅವರು ಒಪ್ಪಿಕೊಂಡರೆ ನಾವು ಮಾಡುತ್ತೇವೆ.

ಶ್ರೀ ಕೆ. ಹೆಚ್. ಪಾಟೀಲ್.—ಕರ್ನಾಟಕದಲ್ಲಿ ಗಾರ್ಬೇಜ್ ಕನ್‌ವರ್ಟ್ ಮತ್ತು ಟರ್ಬೈನ್ ಮೂಲಕ ಎಲೆಕ್ಟ್ರಿಸಿಟಿಯನ್ನು ಉತ್ಪನ್ನ ಮಾಡತಕ್ಕಂಥ ಏನಾದರೂ ಯೋಜನೆಯನ್ನು ಹಾಕಿಕೊಂಡಿದ್ದೀರಾ? ಹಾಕಿಕೊಂಡಿದ್ದರೆ ಹೆಚ್.ಎ.ಎಲ್.ನ ಸೈಂಟಿಸ್ಟ್‌ಗಳು ತಯಾರು ಮಾಡಿರತಕ್ಕ ಯೋಜನೆಗಳನ್ನು ಆಳವಡಿಸಿಕೊಂಡು ಎಲೆಕ್ಟ್ರಿಸಿಟಿ ಹುಟ್ಟಿಸಿಕೊಂಡು, ಇದರ ಬಗ್ಗೆ ಪ್ರಯತ್ನ ಮಾಡುವುದು ಒಂದು ಎರಡನೆಯದು, ಬಹಳಷ್ಟು ಜನರು ಹೇಳಿದ್ದಾರೆ, ಇದು ತಪ್ಪೋ ಸರಿಯೋ ಇಲ್ಲವೋ ನನಗೆ ಗೊತ್ತಿಲ್ಲ. ಇವೊತ್ತು ವಿದ್ಯುತ್ ಪೋಲ್ ಬಹಳ ಆಗುತ್ತಿದೆ. It is a non-conventional source of energy. ದೊಡ್ಡ ದೊಡ್ಡ ಇಂಡಸ್ಟ್ರಿಗಳು ೮೦ ಪರ್ಸೆಂಟ್ ಪೋತಾ ಇದ್ದರೂ ಅವು ಬಂದ್ ಆಗಲಿಲ್ಲ ಸಣ್ಣ ಸಣ್ಣ ಇಂಡಸ್ಟ್ರಿಗಳು ಬಂದ್ ಆದವು. ಪೋಲಾಗುವ ವಿದ್ಯುತ್ತನ್ನು ನಮ್ಮ ಅಧಿಕಾರಿಗಳು ತಪ್ಪಿಸಿದರೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಏನಾದರೂ ಚೆಕ್ ಇನ್‌ಸ್ಪೆಕ್ಟರ್ ನೇಮಿಸಿದರೆ ಆದರಿಂದ ಏನೂ ಆಗುವುದಿಲ್ಲ. ಇದನ್ನು ಸರಿಪಡಿಸಲು ಒಂದು ಹೊಸ ಯೋಜನೆಯನ್ನು ಹಾಕಿ ಅವುಗಳು ಬಂದ್ ಆಗದಂತೆ ಬದಲಿ ವ್ಯವಸ್ಥೆ ಮೂಲಕ ವಿದ್ಯುತ್ ಕೊರತೆಯನ್ನು ನೀಗಿಸಲು ಅವಕಾಶವಿದೆಯೇ ?

ಶ್ರೀ ಜೆ. ಹೆಚ್. ಪಟೇಲ್.—ಗಾರ್ಬೇಜ್ ಮೂಲಕ ಎಲೆಕ್ಟ್ರಿಸಿಟಿ ಉತ್ಪನ್ನವನ್ನು ಮಾಡುವ ಯೋಜನೆಯನ್ನು ಸರ್ಕಾರದ ಮುಂದೆ ಇದೆ. ಆದರೆ ಇವುಗಳಿಂದ ಕೊರತೆ ನೀಗುವುದಿಲ್ಲ. ನಾನ್ ಕನ್‌ವೆನ್‌ಷನಲ್ ಸೋರ್ಸ್ ವಿಜನ್ಸಿಗಳಾದ ವಾಯುವಿನಿಂದ ಸೂರ್ಯನಿಂದ ಎಲೆಕ್ಟ್ರಿಸಿಟಿ ಉತ್ಪನ್ನ ಮಾಡುವುದರಿಂದ ಸಣ್ಣ ಪುಟ್ಟ ಕೊರತೆಗಳು ನೀಗಬೇಕೇ ಹೊರತು ಇಂಡಸ್ಟ್ರಿಯಲ್ ನೀಡ್ಸ್‌ಗೆ ಆಗುವುದಿಲ್ಲ ಕೆ.ಇ.ಬಿ.ಯವರು ಸೋಲಾರ್ ಎನರ್ಜಿ ಮುಖಾಂತರ ವಿದ್ಯುತ್ತನ್ನು ಉತ್ಪಾದಿಸುವತ್ತ ಪ್ರಯತ್ನಗಳನ್ನು ಮಾಡಿದ್ದಾರೆ, ಆದರೆ ಅಂತಿಮವಾಗಿ ನಮ್ಮ ಕೊರತೆ ನೀಗಬೇಕಾದರೆ ಎರಡು ಸಾವಿರ ಮೆಗಾವ್ಯಾಟ್ ಸೂಪರ್ ಪವರ್ ಪ್ಲಾಂಟ್ ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ. ಈಗ ಕೈಗಾ ಅಣು ಸ್ಥಾವರ ಸಕಾಲದಲ್ಲಿ ಶುರು ಆದರೆ ಎಲೆಕ್ಟ್ರಿಸಿಟಿ ಪೊಸಿಷನ್ ೮-೧೦ ವರ್ಷಗಳಲ್ಲಿ ಸುಧಾರಿಸಬಹುದು. ಇಂಥ ಒಂದು ಯೋಜನೆಯನ್ನು ಕೇಂದ್ರ ಸರ್ಕಾರದ ಅನುಮತಿ ಮೇರೆಗೆ ನಾವು ಮಾಡಿದ್ದೇವೆ.

ಶ್ರೀ ಕೆ. ಹೆಚ್. ಪಾಟೀಲ್.—ಕೆ.ಇ.ಬಿ, ಮೂಲಕ ಮಾಡುವ ಯೋಜನೆಗೆ ಕೇಂದ್ರ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಕೇಂದ್ರ ಸರ್ಕಾರದವರು ಈ ಯೋಜನೆ ಪ್ರಾರಂಭ ಮಾಡಲು ಅನುಮತಿಯನ್ನು ಕೊಟ್ಟಿದ್ದಾರೆ. ಈ ಯೋಜನೆಗಳು ಬೇರೆ ಕಡೆ ಹೋಗದಂತೆ ವಿಚಾರ ಮಾಡುತ್ತೀರಾ ? ಯಾವುದೇ ಕಾರ್ಯಕ್ರಮವನ್ನು ತೆಗೆದುಕೊಳ್ಳದೆ ಬೇರೆ ಯೋಜನೆಗಳನ್ನು ಮಾಡುವ ಕಡೆ ಗಮನ ಹರಿಸುತ್ತೀರಾ?

ಶ್ರೀ ಜೆ. ಹೆಚ್. ಪಟೇಲ್.—ಇದು ಸರ್ಕಾರದ ಗಮನಕ್ಕೆ ಬಂದಿದೆ. ಆ ಯೋಜನೆಗಳನ್ನು ಮಾಡಲು ಮುಂದೆ ಪರಿಶೀಲಿಸುತ್ತೇವೆ.

ಬೆಳಗಾಂವ ಜಿಲ್ಲೆಯಲ್ಲಿರುವ ಎನ್. ಆರ್. ಇ. ಪಿ. ಹಾಗೂ ಇತರ ಯೋಜನೆಗಳು

೬೨೭. ಶ್ರೀ ಚಂದ್ರಶೇಖರ ಮಾವಜಿ (ಸವದತ್ತಿ) ಮಾನ್ಯ ಅರಣ್ಯ ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾಂ ಜಿಲ್ಲೆಯಲ್ಲಿ ಕಳೆದ ೧೯೮೫-೮೪, ೮೪-೮೫, ೮೫-೮೬ರಲ್ಲಿ ಅರಣ್ಯ ಇಲಾಖೆಯಿಂದ ನೆಟ್ಟ ಗಿಡಗಳ ಸಂಖ್ಯೆ ಎಷ್ಟು ?

ಆ) ಸವದತ್ತಿ ತಾಲ್ಲೂಕಿನಲ್ಲಿ ೧೯೮೫-೮೯ನೇ ಸಾಲಿನಲ್ಲಿ ನೆಟ್ಟ ಗಿಡಗಳ ಸಂಖ್ಯೆ ಎಷ್ಟು, ಎಷ್ಟು ಹೆಕ್ಟೇರ್ ಪ್ರದೇಶದಲ್ಲಿ ಗಿಡನೆಡುವ ಯೋಜನೆ ಮಂತ್ರಿ ಹಾಗೂ ಅದರಲ್ಲಿ ಸಾಧಿಸಿದ ಪ್ರಗತಿಯೇನು?

ಇ) ೧೯೮೬-೮೭ನೇ ಸಾಲಿನಲ್ಲಿ ತಾಲ್ಲೂಕಿನಲ್ಲಿ ಎನ್‌ಆರ್‌ಇಪಿ ಮಂತ್ರಿ, ಇತರೆ ಯೋಜನೆಗೆ ಮಂಜೂರಾದ ಹಾಗೂ ಖರ್ಚಾದ ಹಣ ಎಷ್ಟು ಮಂತ್ರಿ, ಎಷ್ಟು ಎಕರೆ ಭೂಮಿಯಲ್ಲಿ ವನ ಬೆಳೆಸಲಾಗಿದೆ? ಸ್ಥಳಗಳ ವಿವರ ನೀಡುವುದು.

ಈ) ನೆಟ್ಟ ಗಿಡಗಳನ್ನು ರಕ್ಷಿಸಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು?

ಶ್ರೀ ಬಿ. ಜೀ ವಿಜಯ ಮಾನ್ಯ (ಅರಣ್ಯ ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು).—

ಅ) ವರ್ಷ	ನೆಟ್ಟ ಗಿಡಗಳ ಸಂಖ್ಯೆ (ನೆಡುತೋಪುಗಳಲ್ಲಿ)
೧೯೮೪-೮೫	೩೦ ಲಕ್ಷ
೧೯೮೫-೮೬	೧೫೬ ಲಕ್ಷ
೧೯೮೬-೮೭	೭೦ ಲಕ್ಷ

ಆ) ೧೯೮೫-೮೬ನೇ ಸಾಲಿನಲ್ಲಿ ೭.೩೦ ಲಕ್ಷ ಗಿಡಗಳನ್ನು ನೆಡಲಾಗಿದೆ. ಮತ್ತು ೩೬೫ ಹೆಕ್ಟೇರ್ ಪ್ರದೇಶದಲ್ಲಿ ನೆಡುತೋಪುಗಳನ್ನು ಬೆಳೆಸಲಾಗಿದೆ.